ಓ ಎಸ್ ನಂಃ 127/2023
ಪಿ. ಡಬ್ಲ್ಯೂ-1

**(ಇಂದು ದಿನಾಂಕ 23-09-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಮುಂದುವರೆದ ಪಾಟೀಸವಾಲುಃ ಪ್ರತಿವಾದಿ ನಂಃ 1 ರಿಂದ 7 ರವರ ಪರ ಶ್ರೀ ಪಿ ಎಸ್ ಯು ವಕೀಲರಿಂದ**

ಗಂಗಪ್ಪ ಮತ್ತು ಸೋಮಪ್ಪ ಇವರ ಹೆಸರಿಗೆ ದಾವಾ ಆಸ್ತಿಗಳೆಲ್ಲವೂ ಇದ್ದವು ಎಂದು ತೊರಿಸಲು ಯಾವ ದಾಖಲೆ ಹಾಜರುಪಡಿಸಿದ್ದಿರಿ ಎಂದು ಕೇಳಿದರೆ ಸಾಕ್ಷಿಯು ಉತ್ತರಿಸುವುದಿಲ್ಲ . ಗಂಗಪ್ಪ ಮತ್ತು ಸೋಮಪ್ಪ ಇವರ ಹೆಸರಿಗೆ ದಾವಾ ಆಸ್ತಿಗಳೆಲ್ಲವೂ ಇದ್ದವು ಎಂದೂ ಇರಲಿಲ್ಲ ಎಂದರೆ ಸಾಕ್ಷಿಯು ಉತ್ತರಿಸುವುದಿಲ್ಲ . ದಾವಾ ಸ್ವತ್ತುಗಳು ಎಲ್ಲವೂ ಗಂಗಪ್ಪ ಮತ್ತು ಸೋಮಪ್ಪ ಇವರ ಹೆಸರಿಗೆ ಯಾವತ್ತೂ ಇರದೇ ಇದ್ದರೂ ಸಹ ಸದರಿಯವರ ಹೆಸರಿನಲ್ಲಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ನಿಗದಿ ಗ್ರಾಮದ ಸರ್ವೆ ನಂಃ 238 ಜಮೀನು ಗಂಗಪ್ಪ ಮತ್ತು ಸೋಮಪ್ಪ ಇವರ ಹೆಸರಿಗೆ ಇರಲಿಲ್ಲ ಸಾಕ್ಷಿಯು ಅವರ ಮರಣದ ನಂತರ ಖರೀದಿ ಮಾಡಿದ್ದೇವೆ ಎಂದು ಹೇಳುತ್ತಾರೆ . ಸದರಿ ಸ್ವತ್ತನ್ನು ಯಾವಾಗ , ಯಾರ ಹೆಸರಿನಲ್ಲಿ ಖರೀದಿ ಮಾಡಿದ್ದಿರಿ ಎಂಬುವುದರ ಬಗ್ಗೆ ತಮ್ಮ ದಾವಾ ಪತ್ರ ಅಥವಾ ಸಾಕ್ಷಿ ವಿಚಾರಣೆಯ ಪ್ರತಿಜ್ಞಾ ಪತ್ರದಲ್ಲಿ ಹೇಳಿದ್ದಿರಾ ಎಂದರೆ ಸಾಕ್ಷಿಯು ಬರೆಸಿಲ್ಲ ನಮ್ಮ ಅಣ್ಣ ಎಲ್ಲಾ ಮಾಡಿಕೊಂಡು ಬಂದಿದ್ದಾನೆ ಎಲ್ಲಾ ವಿಷಯ ಅವನಿಗೆ ಗೊತ್ತು ಎಂದು ಹೇಳುತ್ತಾರೆ . ನಿಮ್ಮ ಅಣ್ಣ ನಮ್ಮ ಮನೆತನದ ಕರ್ತನಾಗಿ ಕೆಲಸ ಮಾಡುತ್ತಿದ್ದ ಎಂದು ತೊರಿಸುವ ದಾಖಲೆ ಹಾಜರುಪಡಿಸಿಲ್ಲ . ನಿಗದಿ ಗ್ರಾಮದ ಸರ್ವೆ ನಂಃ 238 ರ ಜಮೀನಿನ ಖರೀದಿ ಪತ್ರ ಹಾಜರುಪಡಿಸಿಲ್ಲ . ಸದರಿ ಖರೀದಿ ಪತ್ರವನ್ನು ನಾನು ಯಾವತ್ತು ನೋಡಿಲ್ಲ . ಸದರಿ ಸ್ವತ್ತಿನ ಚಕ್ಕು ಬಂದಿ ನನಗೆ ಗೊತ್ತಿಲ್ಲ . ಸದರಿ ಜಮೀನನ್ನು ಯಾರಿಂದ , ಎಷ್ಟು ಮೊತ್ತಕ್ಕೆ , ಯಾವ ದಿನಾಂಕಂದು ಖರೀ ಮಾಡಿದ್ದಾರೆ ಎನ್ನುವ ಕುರಿತು ಮಾಹಿತಿ ಇದೆಯಾ ಎಂದು ಕೇಳಿದರೆ

ಸಾಕ್ಷಿಯು ಒಬ್ಬ ಮುಸ್ಲಿಂ ವ್ಯಕ್ತಿ ಕಡೆಯಿಂದ ಖರೀದಿ ಮಾಡಿದ್ದಾರೆ ಆದರೆ ದಿನಾಂಕ ಮತ್ತು ಅದರ ಮೊಬಲಗು ಗೊತ್ತಿಲ್ಲ ಎಂದು ಹೇಳುತ್ತಾರೆ . ಸದರಿ ಜಮೀನನ್ನು ಖರೀದಿ ಮಾಡುವ ಮೊದಲು ಆದ ಖರೀದಿ ಮಾತುಕತೆಯ ಮಾಹಿತಿ ನನಗೆ ಇಲ್ಲ . ಸದರಿ ಜಮೀನನ್ನು ಖರೀದಿ ಮಾಡಲು ನಮ್ಮ ಒಟ್ಟು ಕುಟುಂಬದ ಆದಾಯವನ್ನು ಬಳಕೆ ಮಾಡಿಕೊಳ್ಳಲಾಗಿದೆ ಎಂದು ತೋರಿಸುವ ದಾಖಲೆಗಳನ್ನು ಹಾಜರುಪಡಿಸಿಲ್ಲ . ಸದರಿ ಸ್ವತ್ತನ್ನು ನನ್ನ ಅಣ್ಣ ಹೈಸ್ಕೂಲ ಮಾಸ್ತರ ಆಗಿದ್ದ ಕಾರಣ ಅವನ ಸಂಪಾದನೆಯಿಂದ ಬಂದ ಹಣದಲ್ಲಿ ಖರೀದಿ ಮಾಡಿದ್ದು ಆದ ಕಾರಣ ಸದರಿ ಸ್ವತ್ತು ನನ್ನ ಅಣ್ಣನ ಸ್ವಯಾರ್ಜಿತ/ ಸ್ವಂತ ಸ್ವತ್ತು ಎಂದರೆ ಸರಿಯಲ್ಲ . ಸದರಿ ಸ್ವತ್ತು ನನ್ನ ಅಣ್ಣನ ಸ್ವಯಾರ್ಜಿತ/ ಸ್ವಂತ ಸ್ವತ್ತು ಅಂತ ಗೊತ್ತಿದ್ದರೂ ಸಹ ಲಾಭ ಮಾಡಿಕೊಳ್ಳಲು ಅದು ಒಟ್ಟು ಕುಟುಂಬದ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಖರೀದಿ ಮಾಡಿದ ಖರೀದಿ ಪತ್ರದ ಪ್ರಕಾರ ಸದರಿ ಜಮೀನಿನ ಉತಾರಗಳಲ್ಲಿ ನನ್ನ ಅಣ್ಣನ ಹೆಸರು ದಾಖಲಾಯಿತು ಎಂದರೆ ಸರಿ . ನನ್ನ ಅಣ್ಣನ ಮರಣದ ಬಳಿಕ ಪ್ರತಿವಾದಿ 1 ರಿಂದ 3 ರವರ ಹೆಸರು ವಾರಸಾ ಪ್ರಕಾರ ದಾಖಲಾಯಿತು ಎಂದರೆ ಸರಿ . ಪ್ರತಿವಾದಿ 1 ರಿಂದ 3 ರವರ ಹೆಸರು ವಾರಸಾ ಪ್ರಕಾರ ದಾಖಲು ಮಾಡುವ ಕಾಲಕ್ಕೆ ನಾವು ತಕರಾರು ಮಾಡಲಿಲ್ಲ . ನಿಮ್ಮ ಅಣ್ಣ ಬದುಕಿರುವಾಗ ಸದರಿ ಸ್ವತ್ತಿನ ಕುರಿತು ಅದು ಒಟ್ಟು ಕುಟುಂಬದ ಆಸ್ತಿ ಎಂದು ನೀವು ಮಾಗಣಿ ಮಾಡಿದ್ದಿರಾ ಎಂದು ಕೇಳಿದರೆ ಸಾಕ್ಷಿಯು ನಮ್ಮ ಅಣ್ಣ ಯಾವುದನ್ನು ಹೇಳುತ್ತಿರಲಿಲ್ಲ ಎಂದು ಉತ್ತರ ಕೊಡುತ್ತಾರೆ . ನನ್ನ ಅಣ್ಣನ ಮರಣದ ಬಳಿಕ ನನ್ನ ತಮ್ಮನಿಗೆ ಸದರಿ ಸ್ವತ್ತು ನಮ್ಮ ಒಟ್ಟು ಕುಟುಂಬದ ಆಸ್ತಿ ಆಗಿದ್ದು ಹಿಸ್ಸೆ ಕೊಡಿ ಎಂದು ಕೇಳಿದ್ದೇನೆ . ಸಾಕ್ಷಿಯು ನನ್ನ ಅಣ್ಣ ಬದುಕಿರುವಾಗ ಅವನಿಗೂ ಕೇಳಿದ್ದೇವೆ ಎಂದು ಸ್ವತಃ ಹೇಳುತ್ತಾರೆ . ನನ್ನ ದಾವಾದಲ್ಲಿ ನನ್ನ ಅಣ್ಣ ಬದುಕಿರುವಾಗ ಸದರಿ ಆಸ್ತಿಯಲ್ಲಿ ಹಿಸ್ಸೆ ಕೊಡಿ ಎಂದು ಕೇಳಿದ್ದೆ ಎನ್ನುವ ವಿಷಯವನ್ನು ಹೇಳಿಕೊಂಡಿಲ್ಲ . ನನ್ನ ಅಣ್ಣ ಬದುಕಿರುವಾಗ ಆಸ್ತಿಯಲ್ಲಿ ಹಿಸ್ಸೆ ಕೊಡಿ ಎಂದು ಕೇಳಿದ್ದೆವು ಎಂದು ತೋರಿಸಲು ದಾಖಲೆ ಇಲ್ಲ ಸಾಕ್ಷಿಯು ಹಿರಿಯರ ಮೂಲಕ ಕೇಳಿದ್ದೆವು ಎಂದು ಹೇಳುತ್ತಾರೆ . ಸದರಿ ಸ್ವತ್ತು ನನ್ನ ಅಣ್ಣನ ಸ್ವಂತ ಸ್ವತ್ತು ಆಗಿರುವ ಕಾರಣ ಅವನು ಬದುಕಿರುವಾಗ ನಾವು ಹಿಸ್ಸೆ ಕೇಳಿಲ್ಲ ಆದರೂ ಈಗ ಅವನು ಬದುಕಿರುವಾಗ ಹಿಸ್ಸೆ

ಕೇಳಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಹಿರಿಯರನ್ನು ಸೇರಿಸಿ ನಿಮ್ಮ ಅಣ್ಣನಿಗೆ ಹಿಸ್ಸೆ ಕೇಳಿದ ದಿನಾಂಕ , ಸ್ಥಳ , ಹಿರಿಯರ ಹೆಸರು ವಗೈರೆ ನಿಮ್ಮ ದಾವಾ ಪತ್ರದಲ್ಲಿ ಹೇಳಿದ್ದಿರಾ ಎಂದರೆ ಸಾಕ್ಷಿಯು ಹೇಳಿಲ್ಲ ಎಂದು ಹೇಳುತ್ತಾರೆ . ನನ್ನ ಅಣ್ಣ ಬದುಕಿರುವಾಗ ದಾವಾ ಆಸ್ತಿಗಳಲ್ಲಿ ಹಿಸ್ಸೆ ಕೊರಿ ದಾವೆ ದಾಖಲಿಸಿಲ್ಲ . ಸದರಿ ಜಮೀನಿನ ಉತಾರನಲ್ಲಿ ನನ್ನ ಅಣ್ಣನೇ ನಮ್ಮ ಒಟ್ಟು ಕುಟುಂಬದ ಕರ್ತ ಇದ್ದ ಎಂದು ನಮೂದಾಗಿಲ್ಲ . ಸದರಿ ಜಮೀನಿನ ಉತಾರನಲ್ಲಿ ನನ್ನ ಅಣ್ಣನ ಹೆಸರು ಒಟ್ಟು ಕುಟುಂಬದ ಕರ್ತನಾತೆಯಿಂದ ದಾಖಲಾಗಿಲ್ಲ ಅಥವಾ ನಮೂದಾಗಿಲ್ಲ ಎಂದು ಸಕ್ಷಮ ಪ್ರಾಧಿಕಾರದ ಮುಂದೆ ಪ್ರಶ್ನೆ ಮಾಡಿಲ್ಲ . ಸರ್ವೆ ನಂಃ 238 ರ ಜಮೀನು ನನ್ನ ಅಣ್ಣನಿಗೆ ಮಾತ್ರ ಸಂಬಂಧಿಸಿದ್ದು , ಅವನ ಮರಣದ ನಂತರ ಪ್ರತಿವಾದಿ 1 ರಿಂದ 3 ರವರಿಗೆ ಸಂಬಂಧಿಸಿದ್ದು ಆ ಕಾರಣದಿಂದ ಸದರಿ ಜಮೀನಿನ ಚೆಕ್ಕು ಬಂದಿ ಹೇಳಲು ನನಗೆ ಆಗುತ್ತಿಲ್ಲ ಎಂದರೆ ಸರಿಯಲ್ಲ . ನನ್ನ ಅಣ್ಣನ ಮರಣದ ಬಳಿಕ ಸದರಿ ಆಸ್ತಿಯನ್ನು ಕಬಳಿಸಲು ಪ್ರತಿವಾದಿ 1 ರಿಂದ 3 ರವರಿಗೆ ತೊಂದರೆ ನೀಡಲು ಆ ಪ್ರಕಾರ ದಾವೆ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಸರ್ವೆ ನಂಃ 531 ಕ್ಷೇತ್ರ 4 ಎಕರೆ 19 ಗುಂಟೆ ಜಮೀನು _ನಮ್ಮ ಮೂರು ಜನ ಸಹೋದರರ ಅಂದರೆ ಸಿದ್ದಪ್ಪ , ಮಂಜುನಾಥ ಮತ್ತು ವಿಠಲ ಇವರ ಹೆಸರಿಗೆ ಖರೀದಿಯಾಗಿದೆ . ಸದರಿ ಜಮೀನನ್ನು ಸಹ ಒಟ್ಟು ಕುಟುಂಬದ ಆಸ್ತಿಗಳ ಆದಾಯದಿಂದ ಖರೀದಿ ಮಾಡಿದ್ದೆವೆ .

ನನ್ನ ಅಜ್ಜ ಮಲ್ಲಪ್ಪ ಇವರ ಹೆಸರಿಗೆ 11 ಎಕರೆ ಜಮೀನು ಇದ್ದಿದ್ದು ಮಾತ್ರ ಗೊತ್ತು . ಸದರಿ 11 ಎಕರೆ ಜಮೀನಿನ ಸರ್ವೆ ನಂಃ 32 ಮತ್ತು 33 ಇರುತ್ತದೆ . ಸದರಿ ಸ್ವತ್ತುಗಳನ್ನು ಸಹ ಈ ದಾವೆಯಲ್ಲಿ ದಾವಾ ಸ್ವತ್ತುಗಳು ಎಂದು ಕಾಣಿಸಿದ್ದೇನೆ . ಸದರಿ ಆಸ್ತಿಗಳನ್ನು ದಾವಾ ಆಸ್ತಿಗಳು ಎಂದು ಕಾಣಿಸದೇ ಇದ್ದರೂ, ಕಾಣಿಸಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಸರ್ವೆ ನಂ: 557/1, ಸರ್ವೆ ನಂ: 557/2 , ಸರ್ವೆ ನಂ: 557/3 , ಸರ್ವೆ ನಂ: 557/4 , ಸರ್ವೆ ನಂ: 557/5 ಮತ್ತು ಸರ್ವೆ ನಂ: 557/6 ಜಮೀನುಗಳನ್ನು ನನ್ನ ತಂದೆ ಖರೀದಿ ಮಾಡಿದ್ದಾರೆ . ಸದರಿ ಸ್ವತ್ತುಗಳನ್ನು ನಿಮ್ಮ ತಂದೆಯವರೇ ಖರೀದಿ ಮಾಡಿದ್ದಾರೆ ಎಂದು ತೋರಿಸುವ ದಾಖಲೆಗಳನ್ನು ಹಾಜರುಪಡಿಸಿಲ್ಲ . ನಾನು ಹೇಳಿದಂತೆ ಸದರಿ ಆಸ್ತಿಗಳನ್ನು ನನ್ನ ತಂದೆಯವರು ತನ್ನ ಹೆಸರಿನಲ್ಲಿ ಖರೀದಿ ಮಾಡಿಲ್ಲ ಎಂದರೆ ಸರಿಯಲ್ಲ . ಸದರಿ ಆಸ್ತಿಗಳು ಯಾವ ವರ್ಷದಲ್ಲಿ ಖರೀದಿ ಆಗಿವೆ ಎಂದು ನನಗೆ ಗೊತ್ತಿಲ್ಲ . ಸದರಿ ಜಮೀನುಗಳ ಖರೀದಿ ಪತ್ರಗಳನ್ನು ನಾನು ನೋಡಿಲ್ಲ . ಸದರಿ ಆಸ್ತಿಗಳನ್ನು ನನ್ನ ಅಜ್ಜ ಮಲ್ಲಪ್ಪ ತಾನು ಬದುಕಿರುವಾಗ ಖರೀದಿ ಮಾಡಿದ್ದಾನೆ ಎನ್ನುವುದು ಸುಳ್ಳು . ಈಗ ಹೇಳಿದ ಜಮೀನುಗಳಿಗೆ ಹಳ್ಳಿಗೇರಿ ಗ್ರಾಮದ ಸರ್ವೆ ನಂ: 187 ಎಂದು ಇತ್ತು ಎನ್ನುವ ವಿಚಾರ ನನಗೆ ಗೊತ್ತಿಲ್ಲ . ಸರ್ಕಾರದ ಆದೇಶದ ಪ್ರಕಾರ ಸರ್ವೆ ನಂ: 557 ಎಂದು ಪುನಃ ನಂಬರ ಕೊಡಲಾಗಿದೆ ಎಂದರೆ ಸರಿ . ಖರೀದಿ ಪತ್ರದಲ್ಲಿ ಸದರಿ ಜಮೀನುಗಳ ಸರ್ವೆ ನಂಬರ ಒಟ್ಟಾರೆ 557 ಎಂದು ದಾಖಲಾಗಿದೆ ಎಂದರೆ ಸರಿ . ಸದರಿ ಜಮೀನು ಅಖಂಡ ಇರುವಾಗ ನನ್ನ ಅಜ್ಜ ಮಲ್ಲಪ್ಪನ ಹೆಸರು ದಾಖಲಾಗಿತ್ತು ಎಂದರೆ ಸರಿಯಲ್ಲ . ಸದರಿ ಸರ್ವೆ ನಂ: 557 ಯಾವ ವರ್ಷದಲ್ಲಿ ಸಬ್ ಡಿವಿಜನ್ ಆಯಿತು ಎಂದು ನನಗೆ ಗೊತ್ತಿಲ್ಲ . ಸದರಿ ಜಮೀನು ಯಾವ ರೀತಿಯಲ್ಲಿ ಸಬ್ ಡಿವಿಜನ್ ಆಯಿತು ಎಂದು ನನಗೆ ಮಾಹಿತಿ ಇಲ್ಲ .

ಸರ್ವೆ ನಂ: 557/1 ಜಮೀನು ನಿಪಿ-5 ರ ಪ್ರಕಾರ ಮಲ್ಲಪ್ಪ ತಂದೆ ಸೋಮಪ್ಪ ಬೆಳ್ಳಿಗಟ್ಟಿ ಇವರ ಹೆಸರಿನಲ್ಲಿದೆ . ನಿಪಿ-5 ರಲ್ಲಿ ಕಂಡು ಬರುವ ಹೆಸರು ನನ್ನ ಅಜ್ಜನದ್ದು . ನಿಪಿ-6 ರಿಂದ 10 ರಲ್ಲಿ ನಮೂದಿಸಿರುವ ಪ್ರತಿವಾದಿ ನಂ: 2 , 4 , 5 , 6 ಮತ್ತು ವಾದಿ ನಂ: 2 ರವರ ಹೆಸರು ಯಾವ ಆಧಾರದಲ್ಲಿ , ಯಾವ ವರ್ಷದಲ್ಲಿ ನಮೂದಾಯಿತು ಎಂದು ನನಗೆ ಹೇಳಲು ಆಗುವುದಿಲ್ಲ . ಸದರಿ ಆಸ್ತಿಗಳು ಹೇಗೆ ವಿಭಜನೆ ಆದವು ಎಂದು ತಿಳಿದುಕೊಳ್ಳಲು ದಾಖಲೆಗಳನ್ನು ತೆಗೆಯಿಸಿ ನೋಡಿಲ್ಲ . ನನ್ನ ತಂದೆಯವರು ಬದುಕಿರುವಾಗ ಸರ್ವೆ ನಂ: 557 ರ ಜಮೀನಿನಲ್ಲಿ

ತಾನು ಒಂದು ಹಿಸ್ಸೆ ಇಟ್ಟುಕೊಂಡು ತನ್ನ ಮಕ್ಕಳಿಗೆ ಹಿಸ್ಸೆ ಮಾಡಿಕೊಟ್ಟಿದ್ದಾನೆ ಎಂದರೆ ಸರಿಯಲ್ಲ . ನನ್ನ ತಂದೆಯವರು ಬದುಕಿರುವಾಗ ಸದರಿ ಜಮೀನನ್ನು ಹಿಸ್ಸೆ ಮಾಡಿಕೊಟ್ಟಿರುವ ವಿಚಾರ ನನಗೆ ಗೊತ್ತಿದ್ದರೂ ಸಹ ಅದನ್ನು ಒಪ್ಪಿಕೊಂಡರೇ ಸತ್ಯ ಹೊರಬರುತ್ತದೆ ಎನ್ನುವ ಕಾರಣಕ್ಕಾಗಿ ಅದನ್ನು ನಾನು ಒಪ್ಪಿಕೊಳ್ಳುತ್ತಿಲ್ಲ ಎಂದರೆ ಸರಿಯಲ್ಲ . ಸರ್ವೆ ನಂಃ 557 ರ ಜಮೀನಿಗೆ ಯಾಕೆ 06 ಜನರ ಹೆಸರು ದಾಖಲಾಯಿತು ಎಂಬುವುದನ್ನು ನಾನು ಚೌಕಾಶಿ ಮಾಡಲಿಲ್ಲ . ನಿಪಿ-8 ರಲ್ಲಿ ನನ್ನ ಹೆಸರು ನಮೂದು ಇದೆ . ನಿಪಿ -8 ರಲ್ಲಿ ನನ್ನ ಹೆಸರು ಹೇಗೆ ನಮೂದು ಆಯಿತು ಎಂದು ನಾನು ತಿಳಿದುಕೊಳ್ಳಲು ಪ್ರಯತ್ನ ಮಾಡಿಲ್ಲ . ನಿಪಿ-6 ರಿಂದ 10 ರಲ್ಲಿ ನಮೂದಾಗಿರುವ ವಿವರಗಳನ್ವಯ ಸದರಿ ಹಿಸ್ಸೆದಾರರು ಅವರ ಹೆಸರಿನ ಮುಂದೆ ನಮೂದಿಸಿರುವ ಜಮೀನುಗಳ ಕಬ್ಜಾ ವಹಿವಾಟು ಹೊಂದಿದ್ದಾರೆ ಎಂದರೆ ಸರಿ . ಸರ್ವೆ ನಂಃ 557 ಸಬ್ ಡಿವಿಜನ್ ಆದ ಬಗ್ಗೆ ಸಕ್ಷಮ ಪ್ರಾಧಿಕಾರದಲ್ಲಿ ಪ್ರಶ್ನೆ ಮಾಡಿಲ್ಲ .

ನಾವೆಲ್ಲರೂ ಒಟ್ಟು ಕುಟುಂಬದಲ್ಲಿ ಇದ್ದೆವೆ ಎಂದು ತೊರಿಸುವ ಪಡಿತರ ಚೀಟಿ ಇಲ್ಲ . ನಿಮ್ಮ ಅಡಿಗೆ ಕೂಡಿಯೇ ಇದೆಯೋ ಅಥವಾ ಬೇರೆ ಬೇರೆ ಇದೆಯೋ ಎಂದು ಕೇಳಿದರೆ ಸಾಕ್ಷಿಯು 6 ವರ್ಷದಿಂದ ಇಚೆ ಬೇರೆ ಇದೆ ಅದರ ಮೊದಲು ಕೂಡಿಯೇ ಇದ್ದೆವು ಎಂದು ಹೇಳುತ್ತಾರೆ . ನಿಮ್ಮ ಅಡಿಗೆ ಕೂಡಿಯೇ ಇದೆಯೋ ಅಥವಾ ಬೇರೆ ಬೇರೆ ಇದೆಯೋ ಅಥವಾ 6 ವರ್ಷದಿಂದ ಇಚೆ ಬೇರೆ ಬೇರೆ ಆಗಿದೆ ಎಂದು ತೊರಿಸುವ ದಾಖಲೆಗಳನ್ನು ಹಾಜರುಪಡಿಸಿಲ್ಲ . ನಾವು ಪ್ರತ್ಯೇಕ ಸೂರುಗಳಲ್ಲಿ ವಾಸವಿದ್ದೆವೆ .

ನಮ್ಮ ಒಟ್ಟು ಕುಟುಂಬದ ನಿವ್ವಳ ಆದಾಯ ತೊರಿಸುವ ದಾಖಲೆಯನ್ನು ಹಾಜರುಪಡಿಸಿಲ್ಲ . ಆಸ್ತಿಗಳನ್ನು ಖರೀದಿ ಮಾಡುವಾಗ ಕುಟುಂಬದ ಖರ್ಚನ್ನು ತೆಗೆದು ಉಳಿದ ಹಣವನ್ನು ಉಪಯೋಗಿಸಿದ್ದೆವೆ ಎಂದು ತೊರಿಸುವ ದಾಖಲೆಯನ್ನು ಹಾಜರುಪಡಿಸಿಲ್ಲ . ನನ್ನ ದಾವೆಯಲ್ಲಿ ಪಿತಾರ್ಜಿತ ಸ್ವತ್ತು ಮತ್ತು ಒಟ್ಟು ಕುಟುಂಬದ ಸ್ವತ್ತುಗಳನ್ನು ಪ್ರತ್ಯೇಕಿಸಿ

ನಮೂದಿಸಿಲ್ಲ .

ದಾವಾ ಅನುಸೂಚಿ ' ಬಿ ' ಕ್ರಮ ಸಂಖೆ 1 ರಲ್ಲಿ ಕಂಡು ಬರುವ ವಿಪಿಸಿ ನಂಃ 81 ರ ಸ್ವತ್ತು ನಮ್ಮ ಪಿತ್ರಾರ್ಜಿತ ಸ್ವತ್ತಾಗಿರುತ್ತದೆ . ಸದರಿ ಸ್ವತ್ತು ಯಾರಿಂದ , ಯಾರಿಗೆ , ಯಾವಾಗ ಬಂತು ಎಂದು ತೊರಿಸುವ ದಾಖಲೆಗಳನ್ನು ನಾನು ನೋಡಿಲ್ಲ . ನನ್ನ ಅಜ್ಜ ಮಲ್ಲಪ್ಪನ ತಂದೆಯ ಗೊತ್ತಿಲ್ಲ . ಸದರಿ ಆಸ್ತಿಯನ್ನು 1948 ರಲ್ಲಿ ಮಲ್ಲಪ್ಪ ಸಿದ್ದಲಿಂಗಪ್ಪ ಬೆಳ್ಳಿಗಟ್ಟಿಯವರು ಖರೀದಿ ಮಾಡಿದ್ದಾರೆ ಎಂದರೆ ಸರಿ . ಸದರಿ ಸ್ವತ್ತು ಪ್ರತಿವಾದಿ 8 ಮತ್ತು 9 ರವರ ಹೆಸರಿನಲ್ಲಿ ನಮೂದು ಇರುವುದಾಗಿ ಹೇಳಿಕೊಂಡಿದ್ದೇನೆ ಎಂದರೆ ಸರಿ . ನಿಪಿ-11 ರಲ್ಲಿ ಪ್ರತಿವಾದಿ 8 ರವರ ಹೆಸರು ಮಾತ್ರ ಕಂಡು ಬರುತ್ತದೆ ಎಂದರೆ ಸರಿ . ನನ್ನ ದಾವಾ ಪತ್ರದಲ್ಲಿ ಕೆಲವು ಆಸ್ತಿಗಳು ಸ್ವಯಾರ್ಜಿತ ಆಸ್ತಿಗಳು ಆಗಿದ್ದರೂ ಸಹ ಅವುಗಳು ಪಿತ್ರಾರ್ಜಿತ ಸ್ವತ್ತುಗಳು ಎಂದು ಕಾಣಿಸಿದ್ದೇನೆ ಎಂದರೆ ಸರಿಯಲ್ಲ .

ದಾವಾ ಅನೂಸೂಚಿ ಬಿ ಕ್ರಮ ಸಂಖ್ಯೆ 3 ರಲ್ಲಿರುವ ಸ್ವತ್ತು ನಿಮ್ಮ ಕುಟುಂಬಕ್ಕೆ ಸೇರಿದ್ದು ಎಂದು ತೊರಿಸುವ ಯಾವ ದಾಖಲೆಗಳನ್ನು ಹಾಜರುಪಡಿಸಿದ್ದಿರಿ ಎಂದು ಕೇಳಿದರೆ ಸಾಕ್ಷಿಯು ಅವರು ಕೈಯಲ್ಲಿ ಧರಿಸಿರುವುದನ್ನು ನೋಡಿದ್ದೇನೆ ಎಂದು ಹೇಳುತ್ತಾರೆ . ನಿಮ್ಮ ಕುಟುಂಬಕ್ಕೆ 300 ಗ್ರಾಂ ಬಂಗಾರ ಇತ್ತು ಎಂದು ತೊರಿಸುವ ದಾಖಲೆ ಹಾಜರುಪಡಿಸಿದ್ದಿರಾ ಎಂದರೆ ಸಾಕ್ಷಿಯು ನನ್ನ ಅಣ್ಣನಿಗೆ ಗೊತ್ತು ಎಂದು ಹೇಳುತ್ತಾರೆ . ನಮ್ಮ ಕುಟುಂಬಕ್ಕೆ 300 ಗ್ರಾಂ ಚಿನ್ನ ಇರಲಿಲ್ಲ ಆದ್ದರಿಂದ ಅದರ ಕುರಿತಾದ ದಾಖಲೆಯನ್ನು ನನಗೆ ಹಾಜರುಪಡಿಸಲು ಆಗಿಲ್ಲ ಎಂದರೆ ಸರಿಯಲ್ಲ .

ದಾವಾ ಅನುಸೂಚಿ ' ಬಿ ' ಕ್ರಮ ಸಂಖ್ಯೆ 2 , 4 ಮತ್ತು 5 ರಲ್ಲಿನ ಸ್ವತ್ತುಗಳನ್ನು ಪ್ರತಿವಾದಿಯರು ಸಾಲ ಮಾಡಿ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ . ಸದರಿ ಸ್ವತುಗಳನ್ನು

ಖರೀದಿ ಮಾಡಲು ಪ್ರತಿವಾದಿಯರು ತಮ್ಮ ಸಂಪಾದನೆಯ ಹಣ ವಿನಿಯೋಗಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳನ್ನು ಒಟ್ಟು ಕುಟುಂಬದ ಆದಾಯದಿಂದ ಖರೀದಿ ಮಾಡಿದ್ದಾರೆ ಎಂದು ತೋರಿಸುವ ದಾಖಲೆಗಳನ್ನು ಹಾಜರುಪಡಿಸಿಲ್ಲ. ಈ ಹಿನ್ನಲೆಗಳಲ್ಲಿ ನಾನು ದಾವಾದಲ್ಲಿ ಕೇಳಿರುವ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ವಿಚಾರಣೆಯ ಪ್ರತಿಜ್ಞಾ ಪತ್ರದಲ್ಲಿ ಹೇಳಿರುವ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.